## ನಾಮದ ಮಹಿಮೆ



ನಾನು ವೇತನ ಉಳಿತಾಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಸಹೋದ್ಯೋಗಿಯೊಬ್ಬರು, ಒಂದು ದಿನ, 'ಸಾರ್, ನೀವು ಪೋಸ್ಟಾಫೀಸೋ? ರೈಲ್ವೇಸೋ? ಟೆಲಿಫೋನ್ಸೋ?' ಎಂದು ಕೇಳಿದರು. ಬೆಂಗಳೂರಿನ ಎಲ್ಲ ಅಂಚೆ, ರೈಲು ಹಾಗೂ ದೂರವಾಣಿ ಇಲಾಖೆಗಳ ವಿಮಾ ಪಾಲಿಸಿಗಳು ನನ್ನ ವ್ಯಾಪ್ತಿಗೇ ಬರುತ್ತಿದ್ದವು. ಸಹಜವಾಗಿ ನಾನು, 'ಮೂರೂ' ಎಂದು ಉತ್ತರಿಸಿದ್ದೆ. ಎಲ್ಲರೂ ನಗತೊಡಗಿದರು. ಕಡೆಗೆ ಗೊತ್ತಾಯ್ತು. ಬ್ರಾಹ್ಮಣರಲ್ಲಿ ವೈಷ್ಣವ, ಶ್ರೀ ವೈಷ್ಣವ ಹಾಗೂ ಸ್ಮಾರ್ತ ಎಂಬ ಪಂಗಡಗಳಿವೆ. ಆ ಪಂಗಡಗಳಿಗೆ ಮುದ್ರೆ, ನಾಮ, ವಿಭೂತಿ ಅಡ್ಡಪಟ್ಟೆ ಸಂಕೇತಗಳಂತೆ. ಪೋಸ್ಟಾಫೀಸು ಅಂದ್ರೆ ಮುದ್ರೆ, ಟೆಲಿಫೋನ್ಸ್ ಅಂದ್ರೆ ನಾಮ, ವಿಭೂತಿ ಅಡ್ಡಪಟ್ಟೆ ಅಂದ್ರೆ ರೈಲ್ವೇಸ್ ಅಂತೆ! ಈ ಪಂಗಡಗಳಲ್ಲಿ ನಾನು ಯಾವುದಕ್ಕೆ ಸೇರಿದವನು ಎನ್ನುವುದು ಅವರ ಪ್ರಶ್ನೆಯಾಗಿತ್ತು. ಎಲ್ಲಾ ನಾಮದ ಮಹಿಮೆ!

**ವಾ. ಮುರಳೀಧರ**

## ಹಲ್ಕಟ್ ಡಾಕ್ಟರ್



ತೀರ್ಥಹಳ್ಳಿ ಕಡೆಯ ನಮ್ಮ ಬಂಧುವೊಬ್ಬರು ತಮ್ಮ ಮಗಳಿಗೆ ಸೂಕ್ತ ವರನನ್ನು ಹುಡುಕುತ್ತಿದ್ದರು. ಸ್ನೇಹಿತರ ಸಲಹೆಯಂತೆ ಮದುವೆ ಬ್ರೋಕರನಿಗೆ ವರನನ್ನು ಹುಡುಕುವ ಜವಾಬ್ದಾರಿ ವಹಿಸಿದರು. ಒಮ್ಮೆ ನಾವು ಅವರ ಮನೆಗೆ ಹೋಗಿದ್ದಾಗ ಆ ಬ್ರೋಕರನೂ ಬಂದಿದ್ದ. ವರಗಳ ಕೆಲವು ಫೋಟೊ, ಜಾತಕ ತೋರಿಸುತ್ತಿದ್ದ. ಒಂದು ಫೋಟೊ ತೋರಿಸುತ್ತ, 'ಈ ಹುಡುಗನನ್ನು ನೋಡಿ, ಜಾತಕ ಚೆನ್ನಾಗಿದೆ. ವೃತ್ತಿಯಲ್ಲಿ ಹಲ್ಕಟ್ಟು ಡಾಕ್ಟರ್' ಎಂದ. ನಮ್ಮ ಸಂಬಂಧಿಕರು, 'ಹಲ್ಕಟ್ಟು ಡಾಕ್ಟರಾ?' ಎಂದು ಗಾಬರಿಯಾದರು. ಬ್ರೋಕರ್, 'ಹುಂ ಕಣ್ರಿ, ಹಲ್ಲು ಕಟ್ಟುವ ಡಾಕ್ಟರ್... ಅದೇ ರೀ ಡೆಂಟಿಸ್ಟು...' ಎಂದ.

**ಸಾವಿತ್ರಿ ಹೊಳ್ಳ**